ಅತ್ಯಂತ ಪ್ರಜ್ಞಾವಂತ ವ್ಯಕ್ತಿಯೆಂದರೆ ನನ್ನ ದರ್ಜಿ.
ಏಕೆಂದರೆ, ಪ್ರತಿ ಬಾರಿ ಹೋದಾಗಲೂ ಹೊಸದಾಗಿ
ನನ್ನ ಅಳತೆಯನ್ನು ತೆಗೆದುಕೊಳ್ಳುವುದು ಅವನೊಬ್ಬನೇ.

– ಜಾರ್ಜ್ ಬರ್ನಾರ್ಡ್ ಶಾ

ಶಿಕ್ಷಕರ ಸಂಘಗಳು ಹಾಗೂ ಅಗತ್ಯ ಪರಿವರ್ತನೆ

ಕಳೆದ ವರ್ಷ ಮಂಡ್ಯ ಜಿಲ್ಲೆಯ ಎಂಟು ಶೈಕ್ಷಣಿಕ ಬ್ಲಾಕ್‌ಗಳಲ್ಲಿನ ಒಂದರಲ್ಲಿ ಶಿಕ್ಷಕರ ಕಲಿಕಾ ಕೇಂದ್ರವನ್ನು ಆರಂಭಿಸುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಸಮಾರಂಭದ ಭಾಗವಾಗಲು ನನ್ನನ್ನು ಆಹ್ವಾನಿಸಿಲಾಗಿತ್ತು. ನಾನು, ಡಯಟ್ ಪ್ರಾಂಶುಪಾಲರು, ಕ್ಷೇತ್ರ ಶಿಕ್ಷಣಾಧಿಕಾರಿ(ಬಿಇಓ), ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರೂ ಆಗಿರುವ ರಾಜ್ಯ ಶಿಕ್ಷಕರ ಸಂಘದ ಉಪಾಧ್ಯಕ್ಷರು, ತಾಲ್ಲೂಕು ಶಿಕ್ಷಕ ಸಂಘದ ಅಧ್ಯಕ್ಷರು ಹಾಗೂ ನನ್ನ ಸಹೋದ್ಯೋಗಿ, ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಜಿಲ್ಲಾ ಸಂಸ್ಥೆಯ ಮುಖ್ಯಸ್ಥರಾದ ಉಮೇಶ್ ಪಾದೆ ಅವರೊಂದಿಗೆ ಕುಳಿತಿದ್ದೆ. ಮುಂಬರುವ ದಿನಗಳಲ್ಲಿ ಶಿಕ್ಷಕರು ತಮ್ಮ ನಿರಂತರ ವೃತ್ತಿಪರ ಅಭಿವೃದ್ಧಿಗೆ ಆ ಕಲಿಕಾ ಕೇಂದ್ರವನ್ನು ಹೇಗೆ ಬಳಸಿಕೊಳ್ಳಬಹುದು ಎನ್ನುವುದನ್ನು ತಿಳಿಸಿಕೊಡುವುದಕ್ಕೂ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತಿದ್ದ ಕಾರಣ, ಕಾರ್ಯಕ್ರಮವನ್ನು ಆಯೋಜಿಸಲಾದ ಕ್ಷೇತ್ರ ಸಂಪನ್ಮೂಲ ಕೇಂದ್ರದ ಆವರಣದಲ್ಲಿ ನೂರಕ್ಕೂ ಹೆಚ್ಚು ಶಿಕ್ಷಕರು ಸೇರಿದ್ದರು.

ಶಿಕ್ಷಕರಲ್ಲೊಬ್ಬರು ಮುಂದೆ ಬಂದು ಆಹ್ವಾನಿತರನ್ನು ಸ್ವಾಗತಿಸಲು ಹಾಗೂ ಸಭೆಯ ಉದ್ದೇಶವನ್ನು ವಿವರಿಸಲು ತೊಡಗಿದ ಕೂಡಲೇ ರಾಜ್ಯ ಶಿಕ್ಷಕರ ಸಂಘದ ಪ್ರಬಲ ಉಪಾಧ್ಯಕ್ಷರು ನನ್ನ ಎಡಕ್ಕೆ ಕುಳಿತಿದ್ದ ಬಿಇಓ ಅವರನ್ನು

ಶಿಷ್ಟಾಚಾರ ಪಾಲಿಸಲಿಲ್ಲವೆಂದು ತರಾಟೆಗೆ ತೆಗೆದುಕೊಂಡರು ಹಾಗೂ ಸಮಾರಂಭವನ್ನು ಬಿಟ್ಟು ಹೊರನಡೆಯುವುದಾಗಿ ಸ್ಪಷ್ಟ ಮತ್ತು ದೃಢವಾದ ದನಿಯಲ್ಲಿ ಬೆದರಿಸಿದರು. ಇದರಿಂದ ಆಗಬಹುದಾದ ತೀವ್ರ ಮುಜುಗರವನ್ನು ತಪ್ಪಿಸಲು, ಬಿಇಓ ಅವರು ನಿಜಕ್ಕೂ ಆ ಮುಖಂಡರಲ್ಲಿ ಕ್ಷಮೆಕೋರಿ ಮುಂದೆ ಇಂತಹ ತಪ್ಪುಗಳು ಆಗುವುದಿಲ್ಲವೆಂಬ ಪ್ರಾಮಾಣಿಕ ಭರವಸೆಯನ್ನು ನೀಡಿ ಸಮಾಧಾನಪಡಿಸಬೇಕಾಯಿತು. ವೇದಿಕೆಯಲ್ಲಿ ನಡೆಯುತ್ತಿದ್ದುದನ್ನು ಅರಿಯದ ಶಿಕ್ಷಕಿಯು ವಿನೀತಳಾಗಿ ತನ್ನ ಮಾತನ್ನು ಮುಂದುವರೆಸಿದ್ದಂತೆಯೇ, ಅವರಿಬ್ಬರ ಮಧ್ಯೆ ಏನು ನಡೆಯುತ್ತಿದೆ ಎನ್ನುವುದನ್ನು (ಅಸಹಾಯಕರಾಗಿದ್ದ ಡಯಟ್ ಪ್ರಾಂಶುಪಾಲರ ಜೊತೆಗೆ ಅವರಿಬ್ಬರ ಮಧ್ಯೆಯೇ ನನ್ನನ್ನು ಕೂರಿಸಿದ್ದು ವಿಪರ್ಯಾಸ. –ಲೇ.) ನಾನು ಆ ಕೂಡಲೇ ಗ್ರಹಿಸಿದೆ. ಎಲ್ಲರ ಅರಿವಿಗೂ ಬರುವ ಹಾಗೆ ಸಂಘದ ಅಧ್ಯಕ್ಷರು ಸಿಟ್ಟಿಗೊಳಗಾಗಿದ್ದು ಎರಡು ಕಾರಣಗಳಿಂದಾಗಿ; ಮೊದಲನೆಯದು, ಬಿಇಓ ಅವರು ಸ್ವತಃ ಸ್ವಾಗತ ಭಾಷಣ ಮಾಡಲಿಲ್ಲ ಎನ್ನುವುದು, ಎರಡನೆಯದು, ಶಿಕ್ಷಕಿಯು ಭಾಷಣದ ಆರಂಭದಲ್ಲಿಯೇ ಬಹುಶಃ ಡಯಟ್ ಪ್ರಾಂಶುಪಾಲರನ್ನು ಸ್ವಾಗತಿಸಿದ ಕೂಡಲೇ ತಮ್ಮನ್ನು ಸ್ವಾಗತಿಸಲಿಲ್ಲ ಎನ್ನುವುದು.

ಆನಂತರದಲ್ಲಿ ಇಡೀ ಕಾರ್ಯಕ್ರಮವು ಸುಗಮವಾಗಿ ನಡೆಯಿತು. ಆದರೆ, ಮೇಲಿನ ಘಟನೆಯು ನನಗೆ ಈ ಮೊದಲು ಕೈಗಾರಿಕೋದ್ಯಮದಲ್ಲಿ ನಾನು ಕೆಲಸ ಮಾಡುತ್ತಿದ್ದಾಗ ನನಗಾದ ಅನುಭವಗಳನ್ನು ನೆನಪಿಗೆ ತಂದಿತು. ಅಲ್ಲಿ, ಕಾರ್ಮಿಕ ಸಂಘಟನೆಗಳ ನಾಯಕರು ತಮ್ಮ ಅನುಯಾಯಿಗಳ ಮುಂದೆ ಪ್ರತಿಷ್ಠೆಯನ್ನು ಮೆರೆಯಲು ಇದೇ ರೀತಿ ಉತ್ಪಾದನಾ ವಿಭಾಗದ ಮುಖ್ಯಸ್ಥರು ಹಾಗೂ ಅಲ್ಲಿನ ವ್ಯವಸ್ಥಾಪಕರ ಮೇಲೆ ತಮ್ಮ ಪ್ರಭಾವವನ್ನು ತೋರಿಸುತ್ತಿದ್ದರು.

ರಾಜ್ಯದ ಒಟ್ಟು ಐದು ಲಕ್ಷ ನಲವತ್ತು ಸಾವಿರ ಸರ್ಕಾರಿ ಉದ್ಯೋಗಿಗಳಲ್ಲಿ ಎರಡು ಲಕ್ಷ ಇಪ್ಪತ್ತು ಸಾವಿರದಷ್ಟು ದೊಡ್ಡ ಪ್ರಮಾಣದಲ್ಲಿ ಶಿಕ್ಷಕರೇ ಇದ್ದಾರೆ (ಸರಿಸುಮಾರು ಶೇ. 40ಕ್ಕೂ ಹೆಚ್ಚು) ಎನ್ನುವ ಸಂಗತಿಯು ಕರ್ನಾಟಕದಲ್ಲಿ ಶಿಕ್ಷಕರ ಸಂಘಗಳು ಸರ್ಕಾರಿ ಉದ್ಯೋಗಿಗಳ ಮೇಲೆ ಹೊಂದಿರುವ ಹಿಡಿತವನ್ನು ತೋರಿಸುತ್ತದೆ. ಅವು ಬಹುದೊಡ್ಡ ಸಂಖ್ಯೆಯ ಮತದಾರ ವರ್ಗವನ್ನು ಹೊಂದಿರುವುದರಿಂದ ಹಾಗೂ ಅಭಿಪ್ರಾಯ ರೂಪಿಸಬಲ್ಲ ಪ್ರಭಾವಿ ಗುಂಪಾಗಿ ಇರುವುದರಿಂದ ಎಲ್ಲಾ ರಾಜಕೀಯ ಪಕ್ಷಗಳೂ ಅವುಗಳ ಬಗ್ಗೆ ಜಾಗರೂಕವಾಗಿ ಇರುತ್ತವೆ. ಕಳೆದ ಕೆಲವು ವರ್ಷಗಳಲ್ಲಿ ಶಿಕ್ಷಕರ ಸಂಘಗಳು ಆಡಳಿತ ವ್ಯವಸ್ಥೆ–ಯೊಳಗಿನ ದೌರ್ಬಲ್ಯದ ಲಾಭವನ್ನು ಪಡೆದು, ನೇರವಾಗಿ ಅಂತಹ ಹಲವಾರು ರಾಜಕೀಯ ಪಕ್ಷಗಳ ಆಶ್ರಯದಲ್ಲಿ ಬಹುಶಃ ಮತ್ತಷ್ಟು ಪ್ರಬಲವಾಗಿ ಬೆಳೆದಿವೆ.

ತಾಲ್ಲೂಕು ಮಟ್ಟದಲ್ಲಿಯೂ ಕೂಡ ಪ್ರಾಥಮಿಕ, ಪ್ರೌಢ ಹಾಗೂ ಪದವಿ–ಪೂರ್ವ ಮಟ್ಟದ ಶಿಕ್ಷಕರ ಅಗತ್ಯಗಳನ್ನು ಪ್ರತ್ಯೇಕವಾಗಿ ಪೂರೈಸುವ ಹಲವಾರು ಶಿಕ್ಷಕರ ಒಕ್ಕೂಟಗಳಿವೆ. ಮುಖ್ಯ ಶಿಕ್ಷಕರ ಸಂಘವು ಈ ಶಿಕ್ಷಕರ ಸಂಘಗಳಿಂದ ವಿಭಿನ್ನವಾದ ತನ್ನ ಗುರುತನ್ನು ಹಾಗೆಯೇ ಉಳಿಸಿಕೊಂಡಿದೆ. ತಾಲ್ಲೂಕೊಂದರಲ್ಲಿ ಶಿಕ್ಷಕರ ಸಂಘದ ಒಟ್ಟು ಸದಸ್ಯತ್ವ ಸರಿಸುಮಾರು ಏಳರಿಂದ ಎಂಟು ನೂರು ಇದ್ದರೆ, ಐದು ತಾಲ್ಲೂಕುಗಳಿರುವ ಜಿಲ್ಲೆಯೊಂದರಲ್ಲಿ ಈ ಸಂಖ್ಯೆಯು ನಾಲ್ಕು ಸಾವಿರದವರೆಗೂ ಹೋಗುತ್ತದೆ.

ಈ ಸಂಘಗಳಲ್ಲಿರುವ ಸರಿಸುಮಾರು ಶೇ. 15–20 ಸದಸ್ಯರು 'ರಾಜಕೀಯವಾಗಿ ಸಕ್ರಿಯರು'. ಅವರು ತಮ್ಮ ಮುಖಂಡರುಗಳ ನಿಕಟ ಅನುಯಾಯಿಗಳಾಗಿ ಇರುವುದೊಂದೇ ಅಲ್ಲ, ಅವರ ಮುಖಂಡರು ತೆಗೆದು ಕೊಳ್ಳುವ ನಿರ್ಧಾರ, ಕ್ರಮಗಳ ಮೇಲೂ ಅಗಾಧ ಮಟ್ಟದ ಪ್ರಭಾವವನ್ನು ಬೀರುವಂತಹವರು. ಜವಾಬ್ದಾರಿಗಳನ್ನು ಒಳಗೊಂಡ ಅನುಸೂಚಿತ ಪಟ್ಟಿಯು ಹಗುರವಾಗಿರಬೇಕೆಂದು ಹಾಗೂ ನೀತಿ–ನಿಯಮಗಳನ್ನು ರೂಪಿಸುವುದರಲ್ಲಿ ಹೆಚ್ಚಿನ ಅವಕಾಶ, ಮಾನ್ಯತೆ ಇರಬೇಕೆಂದು ಹೋರಾಡುವುದರ ಜೊತೆಗೆ ವರ್ಗಾವಣೆ, ಸ್ಥಳ ನಿಯುಕ್ತಿ, ನಿಯೋಜನೆ, ಅತಿಥಿ ಶಿಕ್ಷಕರ ನೇಮಕಾತಿ ಇತ್ಯಾದಿ ಸರ್ಕಾರದ ಕಡೆಯಿಂದ ಆಗಬೇಕಾದ ಯಾವುದೇ ಕೆಲಸವಿರಲಿ ಅದನ್ನು ಈ ಮುಖಂಡರ ಮೂಲಕ ಮಾಡಿಸಿಕೊಳ್ಳುವುದಕ್ಕೆ ಅವರು ಆಯಕಟ್ಟಿನ ಜಾಗಗಳಲ್ಲಿ ಇರುತ್ತಾರೆ. ಸದ್ಯದ ತಾಲ್ಲೂಕು ಮಟ್ಟದ ಹದಿನೈದು–ಇಪ್ಪತ್ತು ಪದಾಧಿಕಾರಿಗಳಲ್ಲದೆ ಕೆಲವು ಮಾಜಿ ಪದಾಧಿಕಾರಿಗಳೂ ಸೇರಿ ವ್ಯವಸ್ಥೆಯಲ್ಲಿ ತಮಗಿರುವ ಪ್ರಬಲ ಹಾಗೂ ಅನುಕೂಲಕರ ಸ್ಥಾನಮಾನಗಳ ಲಾಭವನ್ನು ಪಡೆದುಕೊಳ್ಳುತ್ತಾರೆ ಹಾಗೂ ತಮ್ಮತಮ್ಮ ಶಾಲೆಗಳಲ್ಲಿ ನಿಯಮಿತವಾಗಿ ಕಲಿಸುವ ಕೆಲಸದಿಂದ ತಪ್ಪಿಸಿಕೊಳ್ಳುತ್ತಾರೆ. ಇದರಿಂದ ಸರ್ಕಾರವು ಅವರನ್ನು ಯಾವ ಉದ್ದೇಶಕ್ಕಾಗಿ ಉದ್ಯೋಗದಲ್ಲಿ ನೇಮಿಸಿಕೊಂಡಿದೆಯೋ ಆ ಉದ್ದೇಶವನ್ನೇ ನಿರರ್ಥಕಗೊಳಿಸಿದಂತಾಗುತ್ತದೆ. ತಮ್ಮನ್ನು ನಿಯುಕ್ತಿಗೊಳಿಸಲಾದ ಶಾಲೆಗಳಿಂದಲೂ ಆಗಾಗ ಕಣ್ಮರೆಯಾಗುವ ಅವರು ಬಿಇಓ, ಬಿಆರ್‌ಸಿ ಮತ್ತಿತರ ಶಿಕ್ಷಣ ಅಧಿಕಾರಿಗಳ ಕಚೇರಿಗಳ ಸುತ್ತಮುತ್ತ ಕೆಲಸವಿಲ್ಲದೆ ಸುತ್ತಾಡಿಕೊಂಡಿರುತ್ತಾರೆ ಅಥವಾ ಜಾಗರೂಕ ಕಾವಲುಗಾರರಂತೆ ತೋರ್ಪಡಿಸಿಕೊಳ್ಳುತ್ತ ಪದಾಧಿಕಾರಿಗಳೊಂದಿಗೆ ಸದಾ ಅಲೆದಾಡುತ್ತಿರುತ್ತಾರೆ. ಹೀಗೆ ಮಕ್ಕಳಿಗೆ ಪಾಠ ಮಾಡಬೇಕಾದ ತಮ್ಮ ಹೊಣೆಯನ್ನು ಬೇರೆ ಶಿಕ್ಷಕರ ಮೇಲೆ ಹಾಕಿ, ತಮ್ಮದೇ ಶಾಲೆಯನ್ನು ಒಬ್ಬರೇ ಶಿಕ್ಷಕರಿರುವ ಅಥವಾ ಇಬ್ಬರು ಶಿಕ್ಷಕರಿರುವ ಶಾಲೆಯನ್ನಾಗಿ ಮಾಡಿಬಿಡುತ್ತಾರೆ.

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಶೈಕ್ಷಣಿಕ ಆಡಳಿತಕ್ಕೆ ಸಂಬಂಧಿಸಿದಂತೆ ಎಲ್ಲಾ ಮಹತ್ವದ ಸಂಗತಿಗಳಿಗೂ ತಮ್ಮನ್ನು ಕಂಡು ವಿಶ್ವಾಸಕ್ಕೆ ತೆಗೆದುಕೊಂಡು ಸಲಹೆ ಪಡೆಯಬೇಕೆಂದು ಈ ಮುಖಂಡರು ನಿರೀಕ್ಷಿಸುತ್ತಾರೆ. ಆ ಅಧಿಕಾರಿಗಳೋ ಇವರ ಉಸಾಬರಿಯೇ ಬೇಡವೆಂದು ಹಾಗೂ ತಮ್ಮ ದೈನಂದಿನ ಕೆಲಸಕಾರ್ಯಗಳು ಹದಗೆಡುವುದು ಬೇಡವೆಂದು ಅವರನ್ನು ತುಂಬಾ ಎಚ್ಚರಿಕೆಯಿಂದಲೇ ನೋಡಿಕೊಳ್ಳುತ್ತಾರೆ.

ರಾಜ್ಯಮಟ್ಟದಲ್ಲಿ ಶಿಕ್ಷಕ ಸಂಘದ ಮುಖಂಡರು ಶಿಕ್ಷಣ ಮಂತ್ರಿ ಮತ್ತು ಹಿರಿಯ ಸರ್ಕಾರಿ ಅಧಿಕಾರಿಗಳ ನಿಕಟ ಸಂಪರ್ಕದಲ್ಲಿದ್ದು ಆಗಿಂದಾಗ್ಗೆ ಶಿಕ್ಷಕ ಸಮುದಾಯದ ಪರವಾಗಿ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಲೇ ಇರುತ್ತಾರೆ. ತಮ್ಮ ರಾಜಕೀಯ ಒಡನಾಟ ಹಾಗೂ ಪ್ರಭಾವದಿಂದಾಗಿ ಅಧಿಕಾರದ ಕೇಂದ್ರ ಸ್ಥಳಗಳಲ್ಲಿ ಪ್ರತಿಷ್ಠೆ, ಗೌರವಗಳು ಸಿಗಬೇಕು ಎಂದು ಒತ್ತಾಯಿಸುತ್ತಾರೆ ಹಾಗೂ ಪಡೆದುಕೊಳ್ಳುತ್ತಾರೆ. ಆ ಮೂಲಕ ತಮ್ಮ ಮಾತು ನಡೆಯುವುದನ್ನು ಖಚಿತಪಡಿಸಿಕೊಳ್ಳುತ್ತಾರೆ.

ಹಾಗಿದ್ದರೂ ಅವರು ಕೈಗೆತ್ತಿಕೊಳ್ಳುವ ಸಮಸ್ಯೆಗಳು ಯಾವ ರೀತಿಯವು ಎನ್ನುವುದರತ್ತ ಸುಮ್ಮನೆ ಕಣ್ಣು ಹಾಯಿಸಿದರೆ ಸಾಕು, ಶಿಕ್ಷಣವನ್ನು ಕುರಿತು ಪ್ರಾಮಾಣಿಕ ಕಳಕಳಿ ಇರುವ ಯಾರಿಗೇ ಆದರೂ ನಿರಾಶೆಯಾಗುವುದು ನಿಜ. ಅವರು ಹೆಚ್ಚಾಗಿ ಶಿಕ್ಷಕರ ಸೌಲಭ್ಯಗಳು ಹಾಗೂ ಸೇವೆಯ ಸ್ಥಿತಿಗತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಾರೆ. ಸರಿಯಾಗಿ ವಿಚಾರ ಮಾಡುವ ಯಾವುದೇ ವ್ಯಕ್ತಿಗೂ ಶಿಕ್ಷಕರ ವೃತ್ತಿಪರ ಅಸ್ಮಿತೆಯು ರಕ್ಷಿಸಲ್ಪಡಬೇಕು ಎನ್ನುವ ಅವರ ಉದ್ದೇಶದ ಕುರಿತು ಯಾವುದೇ ಗಂಭೀರ ಆಕ್ಷೇಪವಿರಲಾರದು. ಆದರೆ ಅವರು ತಮ್ಮ 'ಇಲ್ಲಿ ಮತ್ತು ಈಗ' ಎಂಬ ಸೀಮಿತ, ಸ್ವಕೇಂದ್ರಿತ ದೃಷ್ಟಿಕೋನದ ಆಚೆ ನೋಡುವುದಿಲ್ಲ ಎಂಬುದರ ಕುರಿತು ಆಕ್ಷೇಪವಿದೆ.

ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುವಂತಹ ಯಾವುದೇ ಗಂಭೀರ ಚರ್ಚೆಗಳಲ್ಲಿ ಶಿಕ್ಷಕ ಸಂಘಗಳು ಭಾಗವಹಿಸುವುದೇ ಅಪರೂಪ. ಉದಾಹರಣೆಗೆ, ಇತ್ತೀಚಿಗೆ ಕೆಲ ಸಮಯದ ಹಿಂದಷ್ಟೆ ಸಂಘಗಳು ಒಂದರಿಂದ ಮೂರನೆಯ ತರಗತಿಯಲ್ಲಿರುವ ನಲಿ–ಕಲಿ ವಿಧಾನವನ್ನು ಪುನರಾವಲೋಕಿಸುವುದರ ಪರವಾಗಿ ತೀವ್ರವಾಗಿ ವಾದಿಸಿದವು. ಅದಕ್ಕೆ ಕಾರಣ, ಈ ವಿಧಾನವು ಕಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರ ಮೇಲೆ ಹೆಚ್ಚುವರಿ ಭಾರವನ್ನು ಹೊರಿಸುತ್ತದೆ ಎನ್ನುವುದು. ತರಗತಿಕೋಣೆಗಳಲ್ಲಿ ಶಿಕ್ಷಕರು ಎದುರಿಸುತ್ತಿರುವ ನಿಜವಾದ ಸವಾಲುಗಳೇನು, ಶಿಕ್ಷಕರು ಪರಿಣಾಮಕಾರಿಯಾಗಿ ಬೋಧನೆಯಲ್ಲಿ ಈ ವಿಧಾನವನ್ನು ಬಳಸಲು

ಪ್ರಸ್ತುತ ಜಾರಿಯಲ್ಲಿರುವ ಪ್ರಕ್ರಿಯೆಗಳು ಸಹಾಯಕಾರಿಯಾಗಿವೆಯೇ, ಬೋಧನೆ ಮತ್ತು ಕಲಿಕೆಯ ಸಾಮಗ್ರಿಗಳು ಸಾಕಷ್ಟು ಪ್ರಮಾಣದಲ್ಲಿ ಸರಿಯಾದ ಸಮಯಕ್ಕೆ ಎಲ್ಲಾ ಶಾಲೆಗಳನ್ನೂ ತಲುಪುತ್ತಿವೆಯೇ, ಶಿಕ್ಷಕರಿಗೆ ಯಾವುದೇ ತರಹದ ಪುನರ್‌ಮನನ ತರಬೇತಿ (Refresher Training) ಹಾಗೂ ಶಾಲೆಗಳಲ್ಲಿ ಅವರಿಗೆ ಹೆಚ್ಚುವರಿ ಶೈಕ್ಷಣಿಕ ಬೆಂಬಲದ ಅಗತ್ಯವಿದೆಯೇ ಅಥವಾ ಈಗಾಗಲೇ ಇರುವ ಶೈಕ್ಷಣಿಕ ಬೆಂಬಲ ವ್ಯವಸ್ಥೆಯು ತನ್ನ ಉದ್ದೇಶಗಳಿಗನುಸಾರ ಸಾಕಷ್ಟು ಉತ್ತಮವಾಗಿ ಕೆಲಸ ಮಾಡುತ್ತಿದೆಯೇ ಇತ್ಯಾದಿಗಳನ್ನು ಅರ್ಥಮಾಡಿ ಕೊಳ್ಳುವುದರತ್ತ ಕೆಲವು ಹೆಜ್ಜೆಗಳನ್ನು ಮುಂದೆ ಇಟ್ಟಿದ್ದರೆ ಅದು ಹೆಚ್ಚು ರಚನಾತ್ಮಕ ವಿಧಾನವಾಗುತ್ತಿತ್ತು.

ದೀರ್ಘಕಾಲದಲ್ಲಿ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುವ ಹಲವಾರು ಪ್ರಮುಖ ಅಂಶಗಳ ಬಗ್ಗೆ ಸಂಘಗಳು ದುರ್ದೈವವಶಾತ್ ಉದಾಸೀನ ಧೋರಣೆಯನ್ನು ತಳೆದಿವೆ. ಉದಾಹರಣೆಗೆ, ಹೊಸ ಶಿಕ್ಷಣ ನೀತಿಗೆ ಸಂಬಂಧಿಸಿದಂತೆ ತಮ್ಮ ವಿಚಾರ ಮತ್ತು ಚಿಂತನೆಗಳ ಮೂಲಕ ಕೊಡುಗೆ ನೀಡುವುದಾಗಿರಬಹುದು, ಪ್ರತಿಯೊಂದು ತರಗತಿಗೆ ಕನಿಷ್ಠ ಒಬ್ಬರು ಶಿಕ್ಷಕರನ್ನು ನಿಯೋಜಿಸುವ ಹಾಗೆ ಖಾಲಿ ಬಿದ್ದಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವಂತೆ ಸರ್ಕಾರವನ್ನು ಆಗ್ರಹಪಡಿಸುವುದಾಗಿರಬಹುದು, ಮಕ್ಕಳಿಗೆ ಅನುಕೂಲಕರವಾದ ಕಲಿಕೆಯ ವಾತಾವರಣವನ್ನು ಒದಗಿಸುವ ನಿಟ್ಟಿನಲ್ಲಿ ನೆರೆಹೊರೆಯ ಶಾಲೆಗಳನ್ನು ವಿಲೀನಗೊಳಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದಾಗಿರಬಹುದು, ಸೇವಾನಿರತ ಶಿಕ್ಷಕರ ತರಬೇತಿಯ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ ಅಥವಾ ಶಾಲಾ ಶಿಕ್ಷಣಕ್ಕಾಗಿ ಆಯವ್ಯಯದಲ್ಲಿ ಹೆಚ್ಚಿನ ಹಣಕಾಸಿನ ಹಂಚಿಕೆಗಾಗಿ ಬೇಡಿಕೆ ಇಡುವುದಾಗಿರಬಹುದು – ಇಂತಹ ವಿಚಾರಗಳಲ್ಲಿ ಶಿಕ್ಷಕರ ಸಂಘಗಳು ಸರ್ಕಾರದ ನೀತಿನಿರೂಪಣೆಗಳಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಸಕ್ರಿಯ ಪಾತ್ರವನ್ನು ವಹಿಸಬೇಕಾದ ಅಗತ್ಯವಿದೆ.

ಇಂದಿನ ಸನ್ನಿವೇಶದಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯು ಕಡಿಮೆಯಾಗುತ್ತಿರುವುದನ್ನು ತಡೆಯುವ ಹಾಗೂ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಪೋಷಕರ ಮತ್ತು ಸಮುದಾಯದ ವಿಶ್ವಾಸವನ್ನು ಮರುಸ್ಥಾಪನೆ ಮಾಡುವ ವಿಷಯದಲ್ಲಿ ಶಿಕ್ಷಕರ ಸಂಘಗಳ ನೈತಿಕ ಹೊಣೆಗಾರಿಕೆಯು ಹಿಂದೆಂದಿಗಿಂತಲೂ ಹೆಚ್ಚಿದೆ.

ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರು, ದೇಶದ ಸಾಮಾಜಿಕ–ಆರ್ಥಿಕ ಸಂರಚನೆಗಳಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ತರುವಲ್ಲಿ

ಇಂತಹ ಸಂಘಗಳ ಕ್ರಿಯಾಶೀಲ ಪಾತ್ರವನ್ನು ಬಹಳ ಕಾಲದಿಂದ ಸಮರ್ಥಿಸುತ್ತಲೇ ಬಂದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಅವರು ನೊಬೆಲ್ ಪ್ರಶಸ್ತಿಯ ಹಣವನ್ನು ಉಪಯೋಗಿಸಿ, ಸ್ಥಾಪಿಸಿದ ಪ್ರತೀಚಿ ಟ್ರಸ್ಟ್ ಎಂಬ ಸಂಸ್ಥೆಯು ಅಂಚಿಗೆ ನೂಕಲ್ಪಟ್ಟ ಸಮುದಾಯಗಳಿಗೆ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಸಿಗುವ ಅವಕಾಶಗಳನ್ನು ಹೆಚ್ಚಿಸುವ ಕಾರ್ಯದಲ್ಲಿ ನಿರತವಾಗಿದ್ದು ಈ ಧ್ಯೇಯೋದ್ದೇಶದಲ್ಲಿ ಶಿಕ್ಷಕರ ಸಂಘಗಳನ್ನು ತೊಡಗಿಸಿಕೊಂಡಿದೆ.

ಅಗಸ್ಟ್ 2008ರಲ್ಲಿ ಸಂಸತ್ತಿನ ಕೇಂದ್ರೀಯ ಭವನದಲ್ಲಿ ಹಿರೇನ್ ಮುಖರ್ಜಿ ಸ್ಮರಣಾರ್ಥವಾಗಿ ಆಯೋಜಿಸಿದ್ದ ಉದ್ಘಾಟನಾ ಉಪನ್ಯಾಸವನ್ನು ನೀಡುತ್ತ ಸೇನ್ ಅವರು, ಇಡೀ ಕಾರ್ಮಿಕ ಶಕ್ತಿಯಲ್ಲಿ ಸಂಘಟಿತ ಕ್ಷೇತ್ರದ ಕಾರ್ಮಿಕರ ಕೇವಲ ಚಿಕ್ಕದೊಂದು ಭಾಗವು ಸಂಘಗಳ ಸದಸ್ಯತ್ವ ಹೊಂದಿದ್ದರೂ ಕೂಡ ಆರೋಗ್ಯ, ಶಿಕ್ಷಣ, ಅಂಚೆ, ರೈಲ್ವೆ ಹಾಗೂ ಇನ್ನಿತರ ಹಲವಾರು ಸೇವಾ ಕ್ಷೇತ್ರಗಳುದ್ದಕ್ಕೂ ವ್ಯಾಪಿಸಿರುವ ಈ ಸಂಘಟನೆಗಳ ಚಟುವಟಿಕೆಗಳು ಬಹುತೇಕ ಎಲ್ಲರ ಬದುಕಿನ ಮೇಲೂ ಪರಿಣಾಮ ಬೀರುತ್ತವೆ ಎನ್ನುವ ಅಂಶವನ್ನು ಎತ್ತಿ ತೋರಿಸಿದರು.

ಸೇನ್ ಅವರ ಪ್ರಕಾರ, ಸಂಘಗಳು ಕಿರಿಕಿರಿ ಉಂಟುಮಾಡುತ್ತವೆ ಎನ್ನುವ ಕಾರಣಕ್ಕೆ ಅವುಗಳ ಬಗ್ಗೆ ಎಲ್ಲರಿಗೂ ಗೊತ್ತಾಗುವ ಹಾಗೆ ಅಸಡ್ಡೆಯನ್ನು ತೋರುವುದು ಸರಿಯಲ್ಲ ಅಥವಾ ಯಾವ ಬದಲಾವಣೆಯೂ ಅನಗತ್ಯ ಎನ್ನುವ ಹಾಗೆ ಅವುಗಳನ್ನು ತುಂಬಾ ಸಂಭಾವಿತ ರೀತಿಯಲ್ಲಿ ನಡೆಸಿಕೊಳ್ಳುವುದೂ ಸರಿಯಲ್ಲ. ಕೇವಲ ಸೀಮಿತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ, ಪಕ್ಷಪಾತಿ ಧೋರಣೆಯನ್ನು ತಾಳಿರುವ ಕಾವಲು ಪಡೆಯಂತೆಯೂ ಅವುಗಳನ್ನು ನಡೆಸಿಕೊಳ್ಳಬಾರದು. ಬದಲಿಗೆ, ಅವು ಸಂಯೋಜಕ ಪಾತ್ರವನ್ನು ನಿರ್ವಹಿಸುವ ರೀತಿಯಲ್ಲಿ ರಚನಾತ್ಮಕ ಸಹಯೋಗವೊಂದು ನಿರ್ಮಾಣವಾಗಬೇಕೆಂದು ಸೇನ್ ವಾದಿಸಿದರು. ಸಂಘಗಳ ರಚನಾತ್ಮಕ ಸಾಮರ್ಥ್ಯವನ್ನು ಸರಿಯಾಗಿಯೇ ಗುರುತಿಸಿದ ಸೇನ್ ಅವರು, ಈ ತರಹದಲ್ಲಿ ಮಾರ್ಪಾಡುಗಳನ್ನು ತರುವುದು ಸಂಘಟಿತ ಕಾರ್ಮಿಕ ಪಡೆಯ ಸಾರ್ವಜನಿಕ ಜವಾಬ್ದಾರಿ ಎಂದು ಹೇಳಿದರು.

ಹೆಚ್ಚಿನ ಮಟ್ಟದ ಗೈರುಹಾಜರಿಯ ಪ್ರಮಾಣ, ಖಾಸಗಿ ಪಾಠದ ಮೇಲಿನ ಅವಲಂಬನೆ, ಬೋಧನೆಯ ವಸ್ತುವಿಷಯಗಳಿಗೆ ಮತ್ತು ಪಾಠ ಮಾಡುವ ಶೈಲಿಗೆ ಹೆಚ್ಚಿನ ಒತ್ತು ನೀಡಬೇಕಾದ ಅಗತ್ಯ ಹಾಗೂ ಪಾಲಕ–ಶಿಕ್ಷಕ ಸಭೆಗಳಲ್ಲಿ ನಡೆಯುವ ನಿಯಮಿತ ಚರ್ಚೆಗಳ ಹಿನ್ನೆಲೆಯಲ್ಲಿ ಬೋಧನೆಯ ಹೊಣೆಯನ್ನು ನಿರ್ಲಕ್ಷಿಸುವುದು ಬಡ ಮತ್ತು ಅವಕಾಶ ವಂಚಿತ ಮಕ್ಕಳ ಶಾಲಾ ಶಿಕ್ಷಣದ ಮೇಲೆ ಗಹನವಾದ ಪರಿಣಾಮವನ್ನು ಬೀರುತ್ತದೆ. ಶಿಕ್ಷಕರ ಸಂಘಟನೆಗಳನ್ನು ಯಶಸ್ವಿಯಾಗಿ ತೊಡಗಿಸಿಕೊಳ್ಳುವುದರ ಮೂಲಕ ಈ ಸಮಸ್ಯೆಗಳಿಗೆ ಕೆಲಮಟ್ಟಿಗೆ

ಪರಿಹಾರಗಳನ್ನು ಕಂಡುಹಿಡಿಯಲು ಪ್ರಯತ್ನಿಸಲಾಗಿದ್ದು ಇದರಲ್ಲಿ ಭಾಗಶಃ ಯಶಸ್ಸು ಲಭಿಸಿದೆ.

ಕಾಯಕ ಸಂಸ್ಕೃತಿಯಲ್ಲಿ ಸುಧಾರಣೆಗಳನ್ನು ತರುವಲ್ಲಿ ಹಾಗೂ ಶಿಕ್ಷಕರಲ್ಲಿ ಸಾಮಾಜಿಕ ಬದ್ಧತೆ ಮತ್ತು ವಿಶಾಲವಾದ ದೃಷ್ಟಿಕೋನವನ್ನು ಬೆಳೆಸುವುದರ ಜೊತೆಗೆ ಹೊಣೆಗಾರಿಕೆಯನ್ನು ರೂಢಿಸುವಲ್ಲಿ ಸಂಘಟನೆಗಳ ಪಾತ್ರ ಹಿರಿದು. ಸಾರ್ವಜನಿಕ ಕ್ಷೇತ್ರದುದ್ದಗಲಕ್ಕೂ ಕಾರ್ಯನಿರ್ವಹಣೆಯಲ್ಲಿ ಧನಾತ್ಮಕ ಬದಲಾವಣೆಗಳನ್ನು ತರುವುದಕ್ಕೆ ಒಕ್ಕೂಟಗಳ ಸಕ್ರಿಯ ಸಹಕಾರವನ್ನು ಪಡೆಯುವುದು ಅತ್ಯಂತ ದೊಡ್ಡ ಸವಾಲಾಗಿದೆ. ಹಾಗಿದ್ದರೂ ಪಶ್ಚಿಮ ಬಂಗಾಳದಲ್ಲಿ ಈವರೆಗಿನ ಖಾಸಗಿ ಶಾಲಾ ಶಿಕ್ಷಕರ ಸಂಘಟನೆಗಳಲ್ಲಿಯೇ ಅತ್ಯಂತ ದೊಡ್ಡದಾದ ಅಖಿಲ ಬಂಗಾಳ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ಸಿಪಿಐ–ಎಂ ನ ಅಂಗಸಂಸ್ಥೆ)ದೊಡನೆ ಕೆಲಸ ಮಾಡಿದ ಪ್ರತೀಚಿ ಟ್ರಸ್ಟ್‌ನ ಅನುಭವಗಳನ್ನು ನೋಡಿದರೆ ಇದು ನಿಜಕ್ಕೂ ಸಾಧ್ಯ ಎನ್ನಿಸುತ್ತದೆ.

ಬರ್ನಾರ್ಡ್ ಶಾ ಹೇಳಿದ್ದರು, 'ಅತ್ಯಂತ ಪ್ರಜ್ಞಾವಂತ ವ್ಯಕ್ತಿಯೆಂದರೆ ನನ್ನ ದರ್ಜಿ. ಏಕೆಂದರೆ, ಪ್ರತಿ ಬಾರಿ ಹೋದಾಗಲೂ ಹೊಸದಾಗಿ ನನ್ನ ಅಳತೆಯನ್ನು ತೆಗೆದುಕೊಳ್ಳುವುದು ಅವನೊಬ್ಬನೇ.' ಬಹುಶಃ ಶಿಕ್ಷಕರ ಸಂಘಗಳು ರಾಷ್ಟ್ರದ ಪುನರ್ನಿರ್ಮಾಣದಲ್ಲಿ ತಮ್ಮ ಪಾತ್ರ ಏನಾಗಿರಬೇಕು ಎಂಬುದರ ಕುರಿತು ಗಾಢವಾಗಿ ಚಿಂತಿಸಬೇಕಾದ ಕಾಲ ಇದು.

■

ಬಿ ಫಸ್ಟ್, 23–07–2016